ವಾರದ ಪತ್ರ

## ಗುರುಸಂತತಿ ಸಾವಿರವಾಗಲಿ!

ಚಂದನವಾಹಿನಿಯಲ್ಲಿ ಸಾದರ ಪಡಿಸುವ ಶಾಲಾ ಪಾಠಗಳು ತುಂಬಾ ಸೊಗಸಾಗಿ ಮೂಡಿಬರುತ್ತಿವೆ. ಭಾಗವಹಿಸುವ ಬಹುತೇಕ ಶಿಕ್ಷಕ– ಶಿಕ್ಷಕಿಯರು ನಿಜವಾದ ಅರ್ಥದಲ್ಲಿ ಸುಶಿಕ್ಷಿತರು. ಅವರ ಚಂದದ ಪ್ರಸಾದನ ನಾಗರಿಕ ದೇಹಭಾಷೆ ಮಧುರ ಉಚ್ಚರಣೆ ಮನದಟ್ಟಾಗುವಂತೆ ಪಾಠ ಹೇಳುತ್ತಾರೆ. ಅವರ ಶೈಲಿಯಲ್ಲಿ ಕಾಳಜಿ ಮತ್ತು ಅಕ್ಕರೆ ಕಾಣಿಸಿಕೊಳ್ಳುತ್ತದೆ. ಅಂತಹ ಪಾಠದ ಸೊಗಸು ಕಂಡು ನಮ್ಮ ವಿದ್ಯಾರ್ಥಿದೆಸೆಯ ನಮ್ಮ ಪ್ರೀತಿಯ ಶಿಕ್ಷಕರು ನೆನಪಾಗುತ್ತಾರೆ. ನಾವೂ ಮತ್ತೆ ಶಾಲಾ ದಿನಗಳಿಗೆ ಜಾರಿ ತರಗತಿಯಲ್ಲಿ ಕೂತು ಪಾಠ ಕೇಳುವ ಪುಳಕವನ್ನು ಅನುಭವಿಸುತ್ತೇವೆ. ಜತೆಗೆ ಬಲು ಹಿಂದೆ ನಾವು ಕಲಿತು ನಂತರ ಮರೆತಿರುವ ಅನೇಕ ವಿಷಯಗಳು ನೆನಪಾಗಿ ಮನಸ್ಸು ಉಲ್ಲಾಸಿತವಾಗುತ್ತದೆ.

ಇದೇ ವಾಹಿನಿ ಕೆಲದಿನಗಳ ಹಿಂದೆ ಪ್ರಸ್ತುತ ಪಡಿಸಿದ ಅಂಧಪ್ರತಿಭೆಗಳ ಕವನವಾಚನ ಕೇಳಿದೆ. ಬಹುತೇಕ ಕವನಗಳು ಹೃದಯ ಸ್ಪರ್ಶಿ ಮತ್ತು ಆರ್ದ್ರವಾಗಿದ್ದವು. 'ಮುಗಿಲು ಬೆಳದಿಂಗಳು', 'ಕೋಗಿಲೆ ಹಾಡು', 'ಸೂರ್ಯ ಕಾಂತಿ' ಮುಂತಾದ ಪ್ರಕೃತಿ ವರ್ಣನೆಗಳಲ್ಲದೆ ಮನುಷ್ಯ ಸಂಬಂಧಗಳನ್ನು ತಮ್ಮ ಒಳಗಣ್ಣಿನ ನೋಟಗಳಿಂದಲೇ ಗ್ರಹಿಸಿ ಮನೋಜ್ಞವಾಗಿ ಕವನಗಳ ಮೂಲಕ ತಲುಪಿಸಿದ ರೀತಿ ಸುಂದರವಾಗಿತ್ತು.

—ಭಾರತಿ ಕಾಸರಗೋಡು

## ದೇಹ ಕಪ್ಪಾದರೆ ಮನ ಕಪ್ಪೇ?

ಇತ್ತೀಚಿನ ದಿನಗಳಲ್ಲಿ ಹಲವು ಟಿ.ವಿ. ಧಾರಾವಾಹಿಗಳಲ್ಲಿ ಕೃಷ್ಣವರ್ಣದವಳನ್ನು ನಾಯಕಿಯನ್ನಾಗಿಸಿ ಅವಳ ಸುತ್ತಲೇ ಕಥೆ ಹೆಣೆದು ಬೇಕಾಬಿಟ್ಟಿ ಹೀಯಾಳಿಸುವ ಸನ್ನಿವೇಶಗಳನ್ನು ತೋರಿಸುತ್ತಿದ್ದಾರೆ. ಬಣ್ಣದ ಬಗ್ಗೆ ಕುತ್ಸಿತ ಬೈಗಳು, ತಾತ್ಸಾರ, ಅವಮಾನದ ಸಂಭಾಷಣೆಗಳಿಂದ ನೋಡುವ ಕಪ್ಪು ಬಣ್ಣದ ವೀಕ್ಷಕರಿಗೆ ಮುಜುಗರ ಉಂಟಾಗುತ್ತಿದೆ.

ಮೊದಲೆಲ್ಲ ಕಾಳಮ್ಮ, ಕರಿಯಮ್ಮ, ಎಂದೆಲ್ಲ ಹೇಳಿಸುತ್ತಿದ್ದವರು ಈಗೀಗ ನೇರಾನೇರ ಉಗಿಯಲಾರಂಭಿಸಿದ್ದಾರೆ. ಮೈಬಣ್ಣ ದೈವದತ್ತ. ಇನ್ನಾದರೂ ಮನವನ್ನು ಗುಣದಿಂದ ಅಳೆಯಿರಿ, ಬಣ್ಣದಿಂದಲ್ಲ. ವಿಪರ್ಯಾಸವೆಂದರೆ ತಮ್ಮ ತಲೆಗೂದಲು ಕಪ್ಪಾಗಿಸಿಕೊಳ್ಳಲು ಹೇರ್ ಡೈ, ಅದೂ ಇದು ಎಂದು ಇನ್ನಿಲ್ಲದೆ ಪ್ರಯತ್ನಿಸುವ ಈ ಜನರು ಕಪ್ಪು ದೇಹದವರನ್ನು ನಿಂದಿಸುವುದೇಕೆ?

—ಮಾಲತಿ ಎಸ್. ರಾವ್ ಶೃಂಗೇರಿ

## ಬೇಡದ ಸುದ್ದಿಗಳ ವೈಭವೀಕರಣ!

ಹಿರಿಯ ನಟಿ ಜಯಂತಿ ನಿಧನ ಹೊಂದಿದ ಸುದ್ದಿಯನ್ನು ನಮ್ಮ ವಾಹಿನಿಗಳು ಕೇವಲ ಕಾಟಾಚಾರಕ್ಕೆ ಪ್ರಸಾರ ಮಾಡಿ ಕೈ ತೊಳೆದುಕೊಂಡವು. ಒಬ್ಬ ಸೆಲೆಬ್ರಿಟಿ ನಟ ಮತ್ತು ನಿರ್ದೇಶಕರ ನಡುವಿನ ಸಂಘರ್ಷವನ್ನು ಜಿದ್ದಿಗೆ ಬಿದ್ದಂತೆ ವಾರಗಟ್ಟಲೇ ಬಿಟ್ಟೂ ಬಿಡದೆ ಪ್ರಸಾರ ಮಾಡುತ್ತಿದ್ದ ಸುದ್ದಿವಾಹಿನಿಗಳ ಸರಕು ಮುಗಿಯುತ್ತಾ ಬಂತು ಅನ್ನೋ ವೇಳೆಗೆ ಸರಿಯಾಗಿ ಮಂತ್ರಿಮಂಡಲವನ್ನು ಊಹೆಯಂತೆ ವಿಶ್ಲೇಷಿಸಲು ಆರಂಭಿಸಿದವು.

ಒಬ್ಬ ಹೆಸರಾಂತ ಹಿರಿಯ ನಟಿ ಸಾವಿನ ಸಂದರ್ಭದಲ್ಲಿ ತೀವ್ರ ಅಸಡ್ಡೆ ತೋರಿದ ವೈಖರಿ ನೋಡಿದರೆ ಕನ್ನಡದ ಮಾಧ್ಯಮಗಳ ನೈತಿಕ ಮೌಲ್ಯದ ಅಧೋಗತಿಯನ್ನ ತೋರಿಸುತ್ತದೆ. ಕನ್ನಡದ ಸಿನಿಮಾ ವಾಹಿನಿಗಳಲ್ಲಿಯೂ ಸಹ ಮತ್ತದೇ ಹಳಸಿದ ಸಿನಿಮಾಗಳು. ತೀವ್ರ ಬೇಸರವೆಂದರೆ ನಮ್ಮ ಚಂದನ ವಾಹಿನಿ ಕೂಡ ಕಡೆಯ ಪಕ್ಷ ಅಗಲಿದ ಹಿರಿಯ ನಟಿಗೆ ಒಂದು ಶ್ರದ್ಧಾಂಜಲಿಯನ್ನೂ ತೋರದೇ ಇದ್ದಿದ್ದು ಅಚ್ಚರಿ ಮೂಡಿಸಿತು.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಉತ್ತರದ ಹುಡುಕಾಟ

ಕಲರ್ಸ್‌ನ 'ಕನ್ನಡತಿ'ಯು ಮೂಲ ಕಥೆಯ ದಾರಿಗೆ ಬಂದಿದ್ದು ಸರಿಯಷ್ಟೆ. ನಿರ್ದೇಶಕರು ಭೂವಿ ಮತ್ತು ಹರ್ಷ ಅವರ ಗಟ್ಟಿತನವನ್ನು ಇನ್ನಾದರೂ ತೋರಿಸಲು ಅವಕಾಶ ಮಾಡಿ ಕೊಡಬೇಕು. ಸಾನಿಯಾ ಮುಂದೆ ಭೂವಿ ಪೆದ್ದು ಪೆದ್ದಾಗಿ ಉತ್ತರವನ್ನೇ ಕೊಡಲಾರದಷ್ಟು ದಡ್ಡಿಯಾಗಿ ತೋರಿಸಿದ್ದಾರೆ. ಬಾಸ್‌ಗೆ ಎದುರು ಜವಾಬು ಕೊಡದೆ ಹೋದರು ಸರಿ. ಆದರೆ ಕೊನೆಪಕ್ಷ ಸಾನಿಯಾಗೆ ಉತ್ತರ ಕೊಡಬಹುದಲ್ಲ. ಬೇರೆ ಬೇರೆ ಕಡೆ ಭುವಿ ಎಲ್ಲರಿಗೂ ಸಮಾಧಾನವಾಗುವಂತೆ ಸರಿಯಾದ ಉತ್ತರ ಕೊಟ್ಟಿದ್ದಾಳೆ. ಏಕೆ ಈ ತರಹ ಆ ಪಾತ್ರವನ್ನು ತಾಳ್ಮೆಗೆ ಮೀರಿ ತೋರಿಸುತ್ತಿದ್ದಾರೆ. ಇದಕ್ಕೆ ನಿರ್ದೇಶಕರು ಉತ್ತರ ನೀಡಬಲ್ಲರೇ?

—ನಾಡಿಗ್ ರಾಮಚಂದ್ರ, ಬೆಂಗಳೂರು

## ಮಾದರಿ ಟೀವಿ

ಇತ್ತೀಚೆಗೆ ಚಂದನ ವಾಹಿನಿಯಲ್ಲಿ ನಿಮ್ಹಾನ್ಸ್ ನಿರ್ದೇಶಕಿ ಪ್ರೇಮಾಮೂರ್ತಿ ಅವರ ಸಂದರ್ಶನ ಪ್ರಸಾರವಾಯಿತು. ಇಂತಹ ಅಪರೂಪದ ವ್ಯಕ್ತಿಗಳ ಪರಿಚಯ ಚಂದನ ಹೊರತಾಗಿ ಯಾವ ವಾಹಿನಿಯಲ್ಲೂ ಸಿಗುವುದಿಲ್ಲ. ಆಕಸ್ಮಿಕ ಎಂಬಂತೆ ಬಂದರೂ ಅದು ತೀರ ಅಪರೂಪ. ಕೆಲ ದಿನಗಳ ಹಿಂದೆ ಅರುಂಧತಿ ನಾಗ್ ಅವರ ಪರಿಚಯವೂ ಸೊಗಸಾಗಿ ಮೂಡಿ ಬಂದಿತ್ತು. ಇಲ್ಲಿನ ಹಲವು ಕಾರ್ಯಕ್ರಮಗಳು ಮನೋರಂಜನೆಯ ಬಹುತೇಕ ಟೀವಿಗಳಿಗೆ ಮಾದರಿಯಾಗಿದೆ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಅಪೇಕ್ಷೆಪಟ್ಟಂತೆ ಆಗಿದೆ

ಕಲರ್ಸ್ ಕನ್ನಡ ವಾಹಿನಿಯವರು ಹಿಂದೆ ಜನಪ್ರಿಯವಾಗಿದ್ದ ಖ್ಯಾತ ಗಾಯಕ ಎಸ್.ಪಿ. ಬಾಲಸುಬ್ರಹ್ಮಣ್ಯಂ ನಡೆಸಿಕೊಡುತ್ತಿದ್ದ 'ಎದೆ ತುಂಬಿ ಹಾಡುವೆನು' ಸಂಗೀತ ಕಾರ್ಯಕ್ರಮವನ್ನು ಮರುಪ್ರಸಾರ ಮಾಡುತ್ತಿರುವುದು ಶ್ಲಾಘನೀಯ. ಅದರ 'ಪ್ರೊಮೊ' ಕೂಡ ಪ್ರಾರಂಭವಾಗಿದೆ. ಇಂದಿನ ಹಲವಾರು ರಿಯಾಲಿಟಿ ಶೋಗಳಿಗಿಂತ ಅದು ಅತ್ಯುತ್ತಮ ಕಾರ್ಯಕ್ರಮ.

ಚಂದನ ವಾಹಿನಿಯಲ್ಲಿ ಈ ಹಿಂದೆ ಪ್ರಸಾರವಾಗುತ್ತಿದ್ದ ಬಹಳ ಜನಪ್ರಿಯವಾಗಿದ್ದ ಹಳೆಯ ಚಿತ್ರಗೀತೆಗಳ 'ಮಧುರ ಮಧುರವೀ ಮಂಜುಳಗಾನ'ವನ್ನು ಮತ್ತೆ ಪ್ರಸಾರ ಮಾಡುವುದೂ ತುಂಬ ಸೂಕ್ತ.

—ಶ್ರೀಧರ್, ಬೆಂಗಳೂರು

## ಡೈಲಾಗ್ ಕಂಠಪಾಠವಲ್ಲ

ಕನ್ನಡ ಸಿರಿ ವಾಹಿನಿಯಲ್ಲಿ, 'ಧಾರವಾಡದಾಗೊಂದ್ ಲವ್ ಸ್ಟೋರಿ' ವಿಭಿನ್ನವಾಗಿ ಬರುತಿದೆ. ಕೂಡು ಕುಟುಂಬಗಳಲ್ಲಿರುವ ಸಾಧಕ– ಬಾಧಕಗಳು ಚೆನ್ನಾಗಿ ಬಿಂಬಿತವಾಗುತ್ತಿವೆ. ಈ ಕುಟುಂಬದಲ್ಲಿ ಹಿರಿಯರೆಲ್ಲರೂ ಬಹಳ ಸಹಜವಾಗಿ ನಟಿಸಿದ್ದಾರೆ. ಆದರೆ, ಅವರ ಇಬ್ಬರು ಹೆಣ್ಣು ಮಕ್ಕಳು ಪೆದ್ದು ಪೆದ್ದಾಗಿ ಬರೆದುಕೊಟ್ಟ ಮಾತುಗಳನ್ನು (ಸಂಭಾಷಣೆ) ಗಿಳಿ ಪಾಠದಂತೆ ಒಪ್ಪಿಸಿದ್ದಾರೆ. ಇದನ್ನು ಹೊರತು ಪಡಿಸಿದರೆ ಉಳಿದೆಲ್ಲ ಪಾತ್ರಧಾರಿಗಳು ಉತ್ತಮವಾಗಿ ನಟಿಸಿದ್ದಾರೆ.

—ಶಂಕರೇಗೌಡ ತುಂಬಕೆರೆ, ಮಂಡ್ಯ

## ಕಸದಬುಟ್ಟಿಯಲ್ಲಿ ತರಕಾರಿ ಶುದ್ಧ!

ಕಲರ್ಸ್ ಕನ್ನಡ ವಾಹಿನಿಯಲ್ಲಿ ಮೂಡಿ ಬರುತ್ತಿರುವ 'ರಾಜರಾಣಿ' ರಿಯಾಲಿಟಿ ಶೋನಲ್ಲಿ ಸ್ಪರ್ಧಿ ಒಬ್ಬರು ಅಡುಗೆ ತಯಾರಿಸುವಾಗ ತರಕಾರಿಯನ್ನು ಕಸದ ಬುಟ್ಟಿಯಲ್ಲಿ (ಡಸ್ಟ್ ಬಿನ್) ತೊಳೆದಿದ್ದು ನೋಡಿದ ಯಾರಿಗೇ ಆದರೂ ವಾಕರಿಕೆ ಬಾರದೇ ಇರದು. ತಯಾರಿಸಿದ ಪದಾರ್ಥವನ್ನು ತೀರ್ಪುಗಾರರು ಯಾವ ಧೈರ್ಯದ ಮೇಲೆ ಸೇವಿಸಿ, ರುಚಿ ನೋಡಿದರೋ ತಿಳಿಯದು. ತರಕಾರಿಯನ್ನು ಕಸದ ಬುಟ್ಟಿಯಲ್ಲಿ ತೊಳೆಯಬಾರದು. ಅದನ್ನು ನೋಡಿದ ವೀಕ್ಷಕರಿಗೆ ಏನು ಅನಿಸಬಹುದು ಎಂದು ಯೋಚಿಸಬೇಕು.

—ನಳಿನಿ ಮಾಗಲ್, ಸಕಲೇಶಪುರ